# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103.

ದಿನಾಂಕ: 18.09.2026 ರಂದು ಸಮಯ 10:00 ಗಂಟೆಗೆ ವಿಶ್ವವಿದ್ಯಾನಿಲಯದ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ, ಬಿ.ಹೆಚ್.ರಸ್ತೆ, ತುಮಕೂರು ಇಲ್ಲಿ ನಡೆದ 2026-27ನೇ ಸಾಲಿನ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು

**ಹಾಜರಾದ ಸದಸ್ಯರು**

| | | |
|---|---|---|
| 1. | **ಪ್ರೊ. ನಾಗಭೂಷಣ ಹೆಚ್**<br>ಮಾನ್ಯ ಕುಲಪತಿಗಳು (ಪ್ರ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಅಧ್ಯಕ್ಷರು |
| 2. | **ಶ್ರೀ ಈರಪ್ಪನಾಯಕ ಡಿ.ಎನ್.**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ | ಸದಸ್ಯರು |
| 3. | **ಡಾ. ಸಿದ್ಧರಾಜು ಕೆ.ಎಸ್.**<br>ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ಹೆಚ್.ಎಂ. ಗಂಗಾಧರಯ್ಯರಸ್ತೆ, ಸರಸ್ವತಿ ಪುರಂ, ಮರಳೂರು (ಅಂಚೆ), ತುಮಕೂರು-572105. | ಸದಸ್ಯರು |
| 4. | **ಶ್ರೀ ವೀರಣ್ಣ, ಎಸ್.ಸಿ.,**<br>ಪ್ರಾಂಶುಪಾಲರು, ಬಿ.ಎಂ.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಳಿಯಾರು, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ-572218, | ಸದಸ್ಯರು |
| 5. | **ಪ್ರೊ. ಕುಮಾರ್ ಕೆ.ಎಸ್.,**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ, ತುಮಕೂರು ಜಿಲ್ಲೆ-572132 | ಸದಸ್ಯರು |
| 6. | **ಡಾ. ಯದುನಂದನ್ ಎಂ.ಸಿ.,**<br>ಪ್ರಾಂಶುಪಾಲರು, ಶ್ರೀ ಹೊನ್ನಾದೇವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಂಡಿನಶಿವರ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ-572 215 | ಸದಸ್ಯರು |
| 7. | **ಡಾ. ಜ್ಯೋತಿ ಎಂ.ಜಿ.,**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ-572214. | ಸದಸ್ಯರು |
| 8. | **ಪ್ರೊ. ಎಂ. ರಾಮಚಂದ್ರಯ್ಯ**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಡವನಹಳ್ಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ- 572112 | ಸದಸ್ಯರು |
| 9. | **ಡಾ. ವಿಜಯಕುಮಾರಿ ಟಿ.ಆರ್.,**<br>ಪ್ರಾಂಶುಪಾಲರು, ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ತಿಪಟೂರು-572201. ತುಮಕೂರು ಜಿಲ್ಲೆ. | ಸದಸ್ಯರು |
| 10. | **ಡಾ. ದಾಕ್ಷಾಯಣಿ ಜಿ.,**<br>ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ಜಿಲ್ಲೆ-572214. | ಸದಸ್ಯರು |
| 11. | **ಪ್ರೊ. ಎಲ್.ಪಿ ರಾಜು**<br>ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 12. | **ಡಾ. ಕೇಶವ**<br>ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |

| | | |
|---|---|---|
| 13. | **ಡಾ. ಬಿ.ಟಿ. ಸಂಪತ್‌ಕುಮಾರ್,**<br>ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | **ಸದಸ್ಯರು** |
| 14. | **ಡಾ. ರವೀಂದ್ರಕುಮಾರ್ ಬಿ.**<br>ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | **ಸದಸ್ಯರು** |
| 15. | **ಡಾ. ನಾಗಭೂಷಣ್. ಹೆಚ್**<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** |
| 16. | **ಪ್ರೊ. ಪರಶುರಾಮ ಕೆ.ಜಿ.,**<br>ಡೀನರು, ಕಲಾ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** |
| 17. | **ಪ್ರೊ. ನೂರ್ ಅಫ್ಜಾ,**<br>ಡೀನರು, ವಾಣಿಜ್ಯ ನಿರ್ವಹಣಾಶಾಸ್ತ್ರ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** |
| 18. | **ಚಾರುಲತ,**<br>ಪ್ರಥಮ ಬಿ.ಎ (ಹೆಚ್.ಇ.ಪಿ), ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು. | **ಸದಸ್ಯರು** |
| 19. | **ಐಶ್ವರ್ಯ ಆರ್.**<br>ದ್ವಿತೀಯ ಬಿ.ಸಿ.ಎ, (4ನೇ ಸೆಮಿಸ್ಟರ್), ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು. | **ಸದಸ್ಯರು** |
| 20. | **ಉಮೇಶ್**<br>ದ್ವಿತೀಯ ಬಿ.ಎಸ್ಸಿ (ಸಿ.ಬಿ.ಝೆಡ್) (4ನೇ ಸೆಮಿಸ್ಟರ್), ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು. | **ಸದಸ್ಯರು** |
| 21. | **ಅರುಣಕುಮಾರ್ ಆರ್.**<br>ಭೌತಶಾಸ್ತ್ರ ವಿಷಯದ ಸಂಶೋಧನಾರ್ಥಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** |
| 22. | **ಡಾ. ಬಿ. ರವಿವೆಂಕಟ್,**<br>ಗ್ರಂಥಪಾಲರು, ವಿಶ್ವವಿದ್ಯಾನಿಲಯ ಗ್ರಂಥಾಲಯ, ತುಮಕೂರು ವಿಶ್ವವಿದ್ಯಾನಿಲಯ | **ಸದಸ್ಯರು** |
| 23. | **ಡಾ. ಬಿ. ಶೇಖರ್**<br>ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** |
| 24. | **ಡಾ. ರವೀಂದ್ರಕುಮಾರ್ ಬಿ.,**<br>ನಿರ್ದೇಶಕರು, ಯೋಜನೆ, ಮೇಲ್ವಿಚಾರಣೆಯ ಸಮಿತಿಯ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** |
| 25. | **ಡಾ. ವಿಲಾಸ್ ಎಂ. ಕಾದ್ರೋಳ್ಕರ್,**<br>ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | **ಸದಸ್ಯರು** |
| 26. | **ಡಾ. ಸುದೀಪ್‌ಕುಮಾರ್ ಆರ್.**<br>ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗ, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು. | **ಸದಸ್ಯರು** |
| 27. | **ಡಾ. ಮೋಹನ ಹೆಚ್.ಎಸ್.**<br>ಕುಲಸಚಿವರು (ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** |
| 28. | **ಶ್ರೀಮತಿ ನಾಹಿದಾ ಜಮ್ ಜಮ್ ಕೆ.ಎ.ಎಸ್.**<br>ಕುಲಸಚಿವರು,<br>ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯ ಕಾರ್ಯದರ್ಶಿ** |

## ಹಾಜರಾಗದ ಸದಸ್ಯರು

| | | |
|---|---|---|
| 1. | **ಆಯುಕ್ತರು, ಅಥವಾ ಇವರ ಪ್ರತಿನಿಧಿ,**<br>ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, 2ನೇ ಮಹಡಿ, ತಾಂತ್ರಿಕ ಶಿಕ್ಷಣ ಇಲಾಖೆ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು-560001. | **ಸದಸ್ಯರು** |
| 2. | **ನಿರ್ದೇಶಕರು,**<br>ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, 3ನೇ ಮಹಡಿ, ಅರಮನೆ ರಸ್ತೆ, ಬೆಂಗಳೂರು.560001. | **ಸದಸ್ಯರು** |
| 3. | **ಶ್ರೀ ಕೆ. ಷಡಕ್ಷರಿ, ಬಿನ್ ಲೇಟ್ ಕಲ್ಲಪ್ಪ**<br>ಮಾನ್ಯ ವಿಧಾನ ಸಭಾ ಸದಸ್ಯರು, ತಿಪಟೂರು ಕ್ಷೇತ್ರ, ನಂ. 455/ಎ, 4ನೇ ಮುಖ್ಯ ರಸ್ತೆ, ಕೆ. ಆರ್. ಬಡಾವಣೆ, ತಿಪಟೂರು, ತುಮಕೂರು ಜಿಲ್ಲೆ-572202, | **ಸದಸ್ಯರು** |
| 4. | **ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ,**<br>ಮಾನ್ಯ ವಿಧಾನ ಪರಿಷತ್ತಿನ ಶಾಸಕರು, ನಂ. 604, ಛಲವಾದಿ ನಿವಾಸ, ವಾಯುನಂದನ ಲೇಔಟ್, ಹೆಬ್ಬಾಳ, ಕೆಂಪಾಪುರ, ಬೆಂಗಳೂರು-560024, | **ಸದಸ್ಯರು** |
| 5. | **ಶ್ರೀ ಡಿ.ಟಿ ಶ್ರೀನಿವಾಸ್**<br>ಮಾನ್ಯ ವಿಧಾನ ಪರಿಷತ್ತಿನ ಶಾಸಕರು, ಕೆ.ಆರ್ ಪುರಂ, ಬೆಂಗಳೂರು | **ಸದಸ್ಯರು** |
| 6. | **ಶ್ರೀ ಚಂದ್ರಶೇಖರಪ್ಪ ಡಿ.,**<br>ಪ್ರಾಂಶುಪಾಲರು, ಸರ್ಕಾರಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ಶಿರಾ, ತುಮಕೂರು ಜಿಲ್ಲೆ. | **ಸದಸ್ಯರು** |
| 7. | **ಡಾ. ಕೊಟ್ರೇಶ್ ಎಂ.**<br>ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | **ಸದಸ್ಯರು** |
| 8. | **ಪ್ರಸಾದ್ ಎಸ್.**<br>ದ್ವಿತೀಯ ವರ್ಷ, ಸ್ನಾತಕೋತ್ತರ ಸಾರ್ವಜನಿಕ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | **ಸದಸ್ಯರು** |
| 9. | **ಚಿಂತನ ಕೆ.ಎಂ.**<br>ಪ್ರಥಮ ಎಂ.ಸಿ.ಎ ವಿಭಾಗ (1ನೇ ಸೆಮಿಸ್ಟರ್)<br>ಸ್ನಾತಕೋತ್ತರ ಗಣಕಯಂತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** |

**ಪ್ರಸ್ತಾವನೆ:**

ದಿನಾಂಕ:18.09.2026ರ ಶುಕ್ರವಾರ ಸಮಯ ಬೆಳಿಗ್ಗೆ 10:00 ಗಂಟೆಗೆ ತುಮಕೂರು ವಿಶ್ವವಿದ್ಯಾನಿಲಯದ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ, ಬಿ.ಹೆಚ್. ರಸ್ತೆ, ತುಮಕೂರು ಇಲ್ಲಿ ನಡೆದ 2026-27ನೇ ಸಾಲಿನ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ತು ಸಭೆಗೆ ಹಿರಿಯ ಡೀನರ ಅಡಿಯಲ್ಲಿ ಹೊಸದಾಗಿ ವಿಶ್ವವಿದ್ಯಾನಿಲಯಕ್ಕೆ ಪ್ರಭಾರ ಕುಲಪತಿಗಳಾಗಿ ಅಧಿಕಾರವನ್ನು ವಹಿಸಿಕೊಂಡಿರುವ ಪ್ರೊ. ನಾಗಭೂಷಣ ಹೆಚ್., ಇವರನ್ನು ಹಾಗೂ ಜೇಷ್ಠತೆ ಮತ್ತು ಸರದಿ ಆಧಾರದ ಮೇಲೆ ಮಾನ್ಯ ಪ್ರಾಂಶುಪಾಲರ ಕೋಟಾದಡಿಯಲ್ಲಿ ಕುಲಪತಿಯವರಿಂದ ನಾಮನಿರ್ದೇಶನಗೊಂಡಿರುವ ಡಾ. ವಿಜಯಕುಮಾರಿ ಟಿ.ಆರ್., ಪ್ರಾಂಶುಪಾಲರು, ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ತಿಪಟೂರು, ತುಮಕೂರು ಜಿಲ್ಲೆ ಮತ್ತು ಡಾ. ದಾಕ್ಷಾಯಣಿ ಜಿ., ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ಜಿಲ್ಲೆ ಹಾಗೂ ಜೇಷ್ಠತೆ ಆಧಾರದ ಮೇಲೆ

ನಾಮನಿರ್ದೇಶನಗೊಂಡಿರುವ ವಾಣಿಜ್ಯ ಮತ್ತು ನಿರ್ವಹಣಾ ಶಾಸ್ತ್ರ ನಿಕಾಯದ ಡೀನರಾದ ಪ್ರೊ. ನೂರ್ ಅಫ್ಜಾ ಇವರನ್ನು ಮತ್ತು ಹೊಸದಾಗಿ ನೇಮಕಗೊಂಡಿರುವ ಕಾಲೇಜು ಅಭಿವೃದ್ಧಿ ಪರಿಷತ್‌ನ ನಿರ್ದೇಶಕರಾದ ಡಾ. ವಿಲಾಸ್ ಎಂ. ಕಾದ್ರೋಳ್ಕರ್ ಇವರನ್ನು ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಎಲ್ಲಾ ಸದಸ್ಯರುಗಳನ್ನು ಶ್ರೀಮತಿ ನಾಹಿದಾ ಜ಼ಮ್ ಜ಼ಮ್ ಕೆ.ಎ.ಎಸ್., ಮಾನ್ಯ ಕುಲಸಚಿವರು ಇವರು ಆತ್ಮೀಯವಾಗಿ ಸ್ವಾಗತಿಸಿದರು ಮತ್ತು ಈ ಕೆಳಕಂಡ ಕಾರ್ಯಸೂಚಿಯನ್ನು ಸಭೆಗೆ ಮಂಡಿಸಿದರು.

| ಕ್ರ.ಸಂ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು |
|---|---|---|
| | | **ಶೈಕ್ಷಣಿಕ ವಿಭಾಗ** |
| 1. | **2026–27:ವಿ.ವಿ.ಪ–01 ಶೈ.ವಿ:01** | **ಸ್ನಾತಕೋತ್ತರ ವಿದ್ಯುನ್ಮಾನ ವಿಭಾಗ, PG Diploma in Embedded System and Design ಮತ್ತು PG Diploma in Internet of Things ಕೋರ್ಸ್‌ನ್ನು ಪ್ರಾರಂಭಿಸುವ ಕುರಿತು.** |
| | **ನಿರ್ಣಯ:** | ಸ್ನಾತಕೋತ್ತರ ವಿದ್ಯುನ್ಮಾನ ವಿಭಾಗ, PG Diploma in Embedded System and Design ಮತ್ತು PG Diploma in Internet of Things ಕೋರ್ಸ್‌ಗಳನ್ನು ಪ್ರಾರಂಭಿಸುವ ಕುರಿತು ಚರ್ಚಿಸಿದ ಸಭೆಯು ಸದರಿ ಕೋರ್ಸುಗಳ ಪಠ್ಯಕ್ರಮಗಳಲ್ಲಿನ ವಿಷಯಗಳನ್ನು ನೋಡಿಕೊಂಡು ಕೋರ್ಸುಗಳ ಪದನಾಮವನ್ನು ಬದಲಾಯಿಸುವುದು ಸೂಕ್ತವೆಂದು ಪ್ರೊ. ಬಿ.ಟಿ. ಸಂಪತ್‌ಕುಮಾರ್ ಮತ್ತು ಪ್ರೊ. ಪರಶುರಾಮ ಕೆ.ಜಿ. ಹಿರಿಯ ಪ್ರಾಧ್ಯಾಪಕರುಗಳು ಸಭೆಗೆ ತಿಳಿಸಿದರು.<br>ಈ ಸಂಬಂಧ, ಸದರಿ ಕೋರ್ಸ್‌ಗಳನ್ನು ಪ್ರಾರಂಭಿಸುವ ಸಂಬಂಧ, ತಜ್ಞ ಅಧ್ಯಾಪಕರ ಸಮಿತಿಯನ್ನು ರಚಿಸುವುದು, ಸದರಿ ಸಮಿತಿಯು ಸಲ್ಲಿಸುವ ಪಠ್ಯಕ್ರಮವನ್ನು ಮತ್ತು ಪರಿನಿಯಮಾವಳಿಯನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು, ಸರ್ಕಾರಕ್ಕೆ ಸಲ್ಲಿಸುವುದಾಗಿ ಮಾನ್ಯ ಕುಲಸಚಿವರು ಸಭೆಯ ಗಮನಕ್ಕೆ ತಂದರು. ಈ ಸಂಬಂಧ, ಮುಂದಿನ ಕ್ರಮ ಕೈಗೊಳ್ಳಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು |
| 2. | **2026–27:ವಿ.ವಿ.ಪ–01 ಶೈ.ವಿ:02** | **ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ವಿಷಯದ ಪರಿಷ್ಕೃತ ಪಠ್ಯಕ್ರಮವನ್ನು ಅಳವಡಿಸಿಕೊಳ್ಳುವ ಸಂಬಂಧ ಅಧಿಸೂಚಿಸಲಾಗಿರುವ ಕ್ರಮದ ಅನುಮೋದನೆ ಕುರಿತು.** |
| | **ನಿರ್ಣಯ:** | ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ವಿಷಯದ ಪರಿಷ್ಕೃತ ಪಠ್ಯಕ್ರಮವನ್ನು ಅಳವಡಿಸಿಕೊಳ್ಳುವ ಸಂಬಂಧ ವಿಶ್ವವಿದ್ಯಾನಿಲಯವು ದಿನಾಂಕ:24.08.2026 ರಂದು ಸದರಿ ವಿಷಯದ ಪರಿಷ್ಕೃತ ಪಠ್ಯಕ್ರಮವನ್ನು ಅಧಿಸೂಚಿಸಲಾಗಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಸ್ಥಿರೀಕರಿಸಿತು. |
| 3. | **2026–27:ವಿ.ವಿ.ಪ–01 ಶೈ.ವಿ:03** | **2026–27ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಾತಿಗೆ ಸೀಟ್‌ಮ್ಯಾಟ್ರಿಕ್ಸ್ ಮತ್ತು ಶುಲ್ಕ ನಿಗದಿಪಡಿಸುವ ಕುರಿತು.** |
| | **ನಿರ್ಣಯ:** | 2026–27ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಗೆ ಸೀಟ್ ಮ್ಯಾಟ್ರಿಕ್ಸ್ ಮತ್ತು ಪ್ರವೇಶಶುಲ್ಕವನ್ನು ನಿಗದಿಪಡಿಸುವ ಸಂಬಂಧ, ಚರ್ಚಿಸಿದ ಸಭೆಯು ದಿನಾಂಕ:29.06.2026 ಮತ್ತು 07.06.2026 ರಂದು ಸಮಿತಿಯು ಸಭೆ ನಡೆಸಿ ಸಲ್ಲಿಸಿರುವ ನಡಾವಳಿಯಲ್ಲಿನ ಶಿಫಾರಸ್ಸಿನಂತೆ 2026–27ನೇ ಶೈಕ್ಷಣಿಕ ಸಾಲಿನ ಸೀಟ್ ಮ್ಯಾಟ್ರಿಕ್ಸ್ ಮತ್ತು ಪ್ರವೇಶ ಶುಲ್ಕ ನಿಗದಿಪಡಿಸಲು ದಿನಾಂಕ: 18.07.2026ರ ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಿರುವಂತೆ, ವಿದ್ಯಾವಿಷಯಕ ಪರಿಷತ್ ಸಭೆಯು ಗಮನಿಸಿ, ಸ್ಥಿರೀಕರಿಸಿತು. |

| | | |
|---|---|---|
| 4. | 2026–27:ವಿ.ವಿ.ಪ–01<br>ಶೈ.ವಿ:04 | **ವಿಶ್ವವಿದ್ಯಾನಿಲಯದ ಕಲಾ ಕಾಲೇಜಿನ ಕಲಾ ವಿಭಾಗಕ್ಕೆ 2026–27ನೇ ಶೈಕ್ಷಣಿಕ ಸಾಲಿಗೆ ಹೆಚ್ಚುವರಿ ವಿಭಾಗಗಳನ್ನು ಮಂಜೂರು ಮಾಡಿರುವ ಕ್ರಮವನ್ನು ಅನುಮೋದಿಸುವ ಕುರಿತು.** |
| | **ನಿರ್ಣಯ:**<br>ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದ ಕಲಾ ಕಾಲೇಜಿನ ಕಲಾ ವಿಭಾಗ ಮುಖ್ಯಸ್ಥರು ಸಲ್ಲಿಸಿರುವ ಮನವಿಯ ಮೇರೆಗೆ, ಸ್ನಾತಕ ಪದವಿಯ HEP ಮತ್ತು HES ವಿಷಯಗಳಿಗೆ 2026–27ನೇ ಶೈಕ್ಷಣಿಕ ಸಾಲಿನಿಂದ ಪ್ರಸ್ತುತವಿರುವ ವಿಭಾಗಗಳನ್ನು ತಲಾ ಒಂದರಂತೆ ಹೆಚ್ಚಿಸಿ, (ಒಂದು ವಿಭಾಗಕ್ಕೆ 72ರ ಪ್ರವೇಶಮಿತಿಯಂತೆ) ನಿಯಮಾನುಸಾರ ಪ್ರವೇಶ ಮಾಡಿಕೊಳ್ಳಲು ದಿನಾಂಕ: 22.04.2026 ರಂದು ವಿಶ್ವವಿದ್ಯಾನಿಲಯವು ಅನುಮತಿಸಿರುವ ಕ್ರಮವನ್ನು ದಿನಾಂಕ: 18.07.2026ರ ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಿರುವಂತೆ, ವಿದ್ಯಾವಿಷಯಕ ಪರಿಷತ್ ಸಭೆಯು ಗಮನಿಸಿ, ಸ್ಥಿರೀಕರಿಸಿತು. | |
| 5. | 2026–27:ವಿ.ವಿ.ಪ–01<br>ಶೈ.ವಿ:05 | **2026–27ನೇ ಶೈಕ್ಷಣಿಕ ಸಾಲಿಗೆ ರಾಜ್ಯ ಶಿಕ್ಷಣ ನೀತಿ ಅನ್ವಯದಂತೆ ವಿವಿಧ ವಿಷಯಗಳ ಅಧ್ಯಯನ ಮಂಡಳಿಗಳು ಸಲ್ಲಿಸಿರುವ ಪಠ್ಯಕ್ರಮಗಳನ್ನು ವಿಶ್ವವಿದ್ಯಾನಿಲಯ ಅಳವಡಿಸಿಕೊಂಡಿರುವ ಕ್ರಮವನ್ನು ಮತ್ತು ಪಠ್ಯಕ್ರಮಗಳನ್ನು ಅನುಮೋದಿಸುವ ಕುರಿತು.** |
| | **ನಿರ್ಣಯ:**<br>ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, 2026–27ನೇ ಶೈಕ್ಷಣಿಕ ಸಾಲಿಗೆ ರಾಜ್ಯ ಶಿಕ್ಷಣ ನೀತಿ ಅನ್ವಯದಂತೆ ವಿವಿಧ ವಿಷಯಗಳ ಅಧ್ಯಯನ ಮಂಡಳಿಗಳು ಸಲ್ಲಿಸಿರುವ ಐದು ಮತ್ತು ಆರನೇ ಸೆಮಿಸ್ಟರ್ ಪಠ್ಯಕ್ರಮಗಳನ್ನು ಮತ್ತು 2025–26ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಪ್ರಾರಂಭಿಸಲಾಗಿರುವ ಸ್ನಾತಕ ವಾಣಿಜ್ಯಶಾಸ್ತ್ರ (B.Com AEDP Courses) ಪದವಿಗಳ ಮೂರು ಮತ್ತು ನಾಲ್ಕನೇ ಸೆಮಿಸ್ಟರ್‌ಗಳ ಪಠ್ಯಕ್ರಮಗಳನ್ನು ದಿನಾಂಕ: 27.07.2026ರ ಸುತ್ತೋಲೆಯಂತೆ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. | |
| 6. | 2026–27:ವಿ.ವಿ.ಪ–01<br>ಶೈ.ವಿ:06 | **2026–27ನೇ ಸಾಲಿನ ಪ್ರಥಮ ವರ್ಷದ LibJrPsy ಮತ್ತು HEJ ಕೋರ್ಸ್‌ಗಳ ಪ್ರವೇಶಾತಿ ಕುರಿತು.** |
| | **ನಿರ್ಣಯ:**<br>ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, 2026–27ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದಂತೆ, LibJrPsy (Library Science, Journalism, Psychology) ಕೋರ್ಸಿಗೆ 12 ವಿದ್ಯಾರ್ಥಿಗಳ ಪ್ರವೇಶಾತಿಯಾಗಿರುವುದರಿಂದ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, 2026–27ನೇ ಸಾಲಿಗೆ ಸದರಿ ಕೋರ್ಸನ್ನು ಮುಂದುವರೆಸಲು ಹಾಗೂ ಸ್ನಾತಕ HEJ ಕೋರ್ಸಿಗೆ, ಕೇವಲ 01 ವಿದ್ಯಾರ್ಥಿಯು ಪ್ರವೇಶಾತಿಯು ಆಗಿರುವ ಹಿನ್ನೆಲೆಯಲ್ಲಿ ಸದರಿ 01 ಪ್ರವೇಶಾತಿಯನ್ನು ರದ್ದುಗೊಳಿಸುವ ಸಂಬಂಧ, ದಿನಾಂಕ:24.08.2026 ರಂದು ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ, ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು.<br>ಮುಂದುವರೆದು, ಸ್ನಾತಕ ಪದವಿಗಳಲ್ಲಿ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸುವ ಕುರಿತು, ಒಂದು ಉಪ ಸಮಿತಿಯನ್ನು ರಚಿಸುವುದು. ಸದರಿ ಉಪಸಮಿತಿಯು ಹೊಸ ಕೋರ್ಸ್‌ಗಳ ಪ್ರಾರಂಭದ ಸಂಬಂಧ, ಸಭೆ ನಡೆಸಿ, ವಿಶ್ವವಿದ್ಯಾನಿಲಯಕ್ಕೆ ವರದಿಯನ್ನು ಸಲ್ಲಿಸುವುದು. | |

<table>
<tr><td rowspan="2">7.</td><td>2026–27:ವಿ.ವಿ.ಪ–01<br>ಶೈ.ವಿ:07</td><td>ಸ್ನಾತಕ ಪದವಿ 5 ಮತ್ತು 6ನೇ ಸೆಮಿಸ್ಟರ್ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರ ವಿಷಯಗಳ ಪಠ್ಯಕ್ರಮವನ್ನು ಅನುಮೋದನೆ ಕುರಿತು.</td></tr>
<tr><td colspan="2"><u>ನಿರ್ಣಯ:</u><br><br>ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, 2026–27ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಪದವಿಯ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರ ವಿಷಯಗಳ 5 ಮತ್ತು 6ನೇ ಸೆಮಿಸ್ಟರ್‌ನ DSC ಯಲ್ಲಿ ಆಯ್ಕೆ ಪತ್ರಿಕೆಗಳನ್ನು ಅಳವಡಿಸಿಕೊಂಡು ಅದರಂತೆ ತರಗತಿಗಳನ್ನು ಬೋಧನೆ ಮಾಡಿಕೊಂಡು, ವಿಶ್ವವಿದ್ಯಾನಿಲಯಕ್ಕೆ ಸದರಿ ವಿಷಯಗಳ ಪಠ್ಯಕ್ರಮವನ್ನು ಸಲ್ಲಿಸಿರುತ್ತಾರೆ. ಅದರಂತೆ, ದಿನಾಂಕ: 28.08.2026ರಂದು ಅಧಿಸೂಚನೆ ಹೊರಡಿಸಿ, ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮವನ್ನು 2026–27ನೇ ಸಾಲಿಗೆ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಸದರಿ ಕೋರ್ಸಗಳನ್ನು ಮುಂದುವರೆಸುವಂತೆ ವಿದ್ಯಾವಿಷಯಕ ಪರಿಷತ್ ಸಭೆಯು ನಿರ್ಣಯಿಸಿ, ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿತು.<br><br>ಮುಂದುವರೆದು, ಸ್ನಾತಕ 5 ಮತ್ತು 6ನೇ ಸೆಮಿಸ್ಟರ್‌ನ ಅರ್ಥಶಾಸ್ತ್ರ ವಿಷಯದ ಪಠ್ಯಕ್ರಮದ ಪರಿಷ್ಕರಣೆಗೆ ಶ್ರೀ ವೀರಣ್ಣ ಎಸ್.ಸಿ., ಮತ್ತು ಡಾ. ಕುಮಾರ್ ಕೆ.ಎಸ್., ಇವರು ಸಭೆಯ ಗಮನಕ್ಕೆ ತಂದರು. ಈ ಸಂಬಂಧ, ಚರ್ಚಿಸಿದ ಸಭೆಯು ಸರ್ಕಾರವು ನಿಗದಿಪಡಿಸಿರುವ ಪ್ರೋಗ್ರಾಮ್ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯಾಗದಂತೆ, 5 ಮತ್ತು 6ನೇ ಸೆಮಿಸ್ಟರ್‌ನಲ್ಲಿ core subject ನೊಂದಿಗೆ Specialization paper ಗಳನ್ನು Introduce ಮಾಡಲು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಇದೊಂದು ಶೈಕ್ಷಣಿಕ ವರ್ಷಕ್ಕೆ ಮಾತ್ರ ಅರ್ಥಶಾಸ್ತ್ರ ವಿಷಯದ ಪಠ್ಯಕ್ರಮವನ್ನು ಪರಿಷ್ಕರಿಸಲು ಹಾಗೂ ಸದರಿ ಪಠ್ಯಕ್ರಮದ ಪರಿಷ್ಕರಣೆಗೆ ಅಧ್ಯಯನ ಮಂಡಳಿಯ ಸಭೆ ಕರೆದು, ತುರ್ತಾಗಿ ಕ್ರಮವಹಿಸುವಂತೆ ಸೂಚಿಸಲು ಸಭೆಯು ತೀರ್ಮಾನಿಸಿತು.<br>ಸ್ನಾತಕ ಪದವಿಯ ಅಧ್ಯಯನ ಮಂಡಳಿಗಳನ್ನು ಇನ್ನು ಮುಂದೆ ಕೆಳಕಂಡಂತೆ ರಚಿಸಲು ಸಭೆಯು ತೀರ್ಮಾನಿಸಿತು.<br>ಸ್ನಾತಕೋತ್ತರ ಪ್ರಾಧ್ಯಾಪಕರು ಅಧ್ಯಕ್ಷರು, ವಿಶ್ವವಿದ್ಯಾನಿಲಯದ ಸ್ನಾತಕ ಪದವಿಯ ಅಧ್ಯಾಪಕರುಗಳು 04 ಜನ ಸದಸ್ಯರು (ಗರಿಷ್ಠ ಪ್ರಮಾಣ), ಅನ್ಯ ವಿಶ್ವವಿದ್ಯಾನಿಲಯದ ಒಬ್ಬ ಪ್ರಾಧ್ಯಾಪಕರು.</td></tr>
<tr><td rowspan="2">8.</td><td>2026–27:ವಿ.ವಿ.ಪ–01<br>ಶೈ.ವಿ:01</td><td>ಬಿ.ಕಾಂ ದ್ವಿತೀಯ ವರ್ಷಕ್ಕೆ Lateral Entry ಮೂಲಕ ಪ್ರವೇಶ ನೀಡಿರುವ ಆದೇಶವನ್ನು ಅನುಮೋದಿಸುವ ಕುರಿತು.</td></tr>
<tr><td colspan="2"><u>ನಿರ್ಣಯ:</u><br><br>ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಕು. ಸಯ್ಯಾದ್ ಆಯುಷಾ ಉನ್ನೀಸಾ ಇವರಿಗೆ Lateral Entry ಮುಖಾಂತರ 3ನೇ ಸೆಮಿಸ್ಟರ್ ಬಿ.ಕಾಂ. ಪದವಿಗೆ ಪ್ರವೇಶ ನೀಡಲು ದಿನಾಂಕ:10.06.2026 ರಂದು ವಿಶ್ವವಿದ್ಯಾನಿಲಯವು ಆದೇಶ ಹೊರಡಿಸಿರುವ ಕ್ರಮವನ್ನು ದಿನಾಂಕ: 18.07.2026ರ ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಿರುವಂತೆ, ವಿದ್ಯಾವಿಷಯಕ ಪರಿಷತ್ ಸಭೆಯು ಗಮನಿಸಿ, ಸ್ಥಿರೀಕರಿಸಿತು.<br>ಮುಂದುವರೆದು, Lateral Entry ಮುಖಾಂತರ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ 1 ಮತ್ತು 2ನೇ ಸೆಮಿಸ್ಟರ್‌ನಲ್ಲಿ ಭಾಷಾ ವಿಷಯಗಳು ಮತ್ತು ಕಡ್ಡಾಯ ಪತ್ರಿಕೆ (ಭಾರತದ ಸಂವಿಧಾನ ಮತ್ತು ಪರಿಸರ ವಿಜ್ಞಾನ) ವಿಷಯಗಳಿಗೆ ಯಾವುದೇ ಹೆಚ್ಚುವರಿ ಅತಿಥಿ ಉಪನ್ಯಾಸಕರುಗಳನ್ನು ತೆಗೆದುಕೊಳ್ಳದೇ ಪ್ರತ್ಯೇಕ ತರಗತಿಗಳನ್ನು ನಡೆಸುವುದು ಹಾಗೂ ಹಾಜರಾತಿ, ಆಂತರಿಕ ಅಂಕಗಳು ಹಾಗೂ ಪ್ರಾಜೆಕ್ಟ್ ತೆಗೆದುಕೊಳ್ಳಲು ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಡುವ ಷರತ್ತಿಗಳೊಂದಿಗೆ ಕಾಲೇಜುಗಳಿಗೆ ಅನುಮತಿಸಲು ಸಭೆಯು ಅನುಮೋದಿಸಿತು.</td></tr>
</table>

| | | |
|---|---|---|
| | **ಪರೀಕ್ಷಾ ವಿಭಾಗ** | |
| 9. | **2026–27:ವಿ.ವಿ.ಪ–01 ಪ.ವಿ:01** | **Double the Duration ಅವಧಿ ಪೂರೈಸಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವ ಕುರಿತು.** |
| | **<u>ನಿರ್ಣಯ:</u>**<br><br>ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, 2010–11ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಪದವಿ ಮತ್ತು ಬಿ.ಇಡಿ. ಪದವಿಯ Double the Duration ಅವಧಿ ಪೂರೈಸಿರುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವನ್ನು ಹೆಚ್ಚಿಸಿ, ಶೈಕ್ಷಣಿಕ ಹಿತದೃಷ್ಟಿಯಿಂದ ಒಂದು ಬಾರಿಯ ಕಡೆಯ ಅವಕಾಶವಾಗಿ ಪರೀಕ್ಷೆ ನಡೆಸಲು ದಿನಾಂಕ:05.05.2026ರ ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಿರುವ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಪರಿಶೀಲಿಸಿ, ಈ ಸಂಬಂಧ, ಸದರಿ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ಕೈಗೊಳ್ಳಲು ಸಭೆಯು ನಿರ್ಣಯಿಸಿತು. | |

**ಕಾರ್ಯಸೂಚಿ ಹೊರತಾಗಿ ಚರ್ಚಿಸಿದ ಇತರೆ ವಿಷಯಗಳು**

1) ಪ್ರೊ. ಎಲ್.ಪಿ ರಾಜು, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ಇವರು ಮಾತನಾಡಿ, ರಾಷ್ಟ್ರೀಯ ಹಿತಾಸಕ್ತಿಯ ಮತ್ತು ರಾಷ್ಟ್ರೀಯ ಭದ್ರತೆ ದೃಷ್ಟಿಯಿಂದ ತುಮಕೂರು ವಿಶ್ವವಿದ್ಯಾನಿಲಯದ ವತಿಯಿಂದ ಸ್ನಾತಕ ಪದವಿಯ ಮಟ್ಟದಲ್ಲಿ ಇತಿಹಾಸ ಪತ್ರಿಕೆಯಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿಯನ್ನು ಒಂದು ವಿಷಯವಾಗಿ ಅಧ್ಯಯನ ಮಾಡಲು ಅನುವಾಗುವಂತೆ ಒಂದು ವಿಷಯವನ್ನು ಪದವಿ ಹಂತದಲ್ಲಿ ಅಳವಡಿಸಲು ಸಭೆಗೆ ಪ್ರಸ್ತಾಪಿಸಿದರು. ಈ ಸಂಬಂಧ, ಮಾನ್ಯ ಕುಲಸಚಿವರು ಸದರಿ ವಿಷಯದ ಕುರಿತು ವಿಶ್ವವಿದ್ಯಾನಿಲಯಕ್ಕೆ ಮನವಿಯನ್ನು ಸಲ್ಲಿಸಲು ಸೂಚಿಸಿದರು, ಈ ಸಂಬಂಧ, ಈಗಾಗಲೇ ಮನವಿ ಸಲ್ಲಿಸಿರುವುದಾಗಿ ಸಭೆಗೆ ತಿಳಿಸಿದರು, ಈ ಸಂಬಂಧ, ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಂಡು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದಾಗಿ ಮಾನ್ಯ ಕುಲಸಚಿವರು ಸಭೆಗೆ ತಿಳಿಸಿದರು. ಇದಕ್ಕೆ ಸಭೆಯು ಒಪ್ಪಿತು.

2) ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದ ಪಿಹೆಚ್.ಡಿ. ಸಂಶೋಧನಾರ್ಥಿಯ ಸಂಶೋಧನಾ ಅವಧಿಯು ಮುಕ್ತಾಯವಾಗಿರುವುದಾಗಿ ಹಾಗೂ ಸದರಿ ವಿದ್ಯಾರ್ಥಿಗೆ ಒಂದು ಬಾರಿಯ ಅವಕಾಶವಾಗಿ ಸಂಶೋಧನಾ ಅವಧಿಯನ್ನು ವಿಸ್ತರಿಸುವಂತೆ ಪ್ರೊ. ಎಲ್.ಪಿ. ರಾಜು, ಹಿರಿಯ ಪ್ರಾಧ್ಯಾಪಕರು, ಇವರು ಸಭೆಗೆ ತಿಳಿಸಿದರು. ಈ ಸಂಬಂಧ, ಮನವಿಯನ್ನು ಸಲ್ಲಿಸಿದಲ್ಲಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಮಾನ್ಯ ಕುಲಸಚಿವರು ಸಭೆಗೆ ತಿಳಿಸಿದರು.

ಮಾನ್ಯ ಕುಲಸಚಿವರು
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಮಾನ್ಯ ಕುಲಪತಿಗಳು
ಕುಲಪತಿಗಳು
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು.